ಐದು ಮೂರ್ಖ ಮೀನುಗಾರರು



ರಾಬರ್ಟ್ ಎಡ್ವರ್ಡ್ಸ್

ಚಿತ್ರ: ಸಿಲ್ವೀ ವಿಕ್ಸ್ಟ್ರೋಮ್



ಐದು ಮೂರ್ಖ ಮೀನುಗಾರರು

ರಾಬರ್ಟಾ ಎಡ್ವರ್ಡ್ಸ್

ಚಿತ್ರ: ಸಿಲ್ವೀ ವಿಕ್ಸ್ಟ್ರೋಮ್





ಒಂದು ದಿನ

ಐದು ಮೀನುಗಾರರು

ಮೀನು ಹಿಡಿಯಲು ಹೊರಟರು.

ಒಂದು, ಎರಡು, ಮೂರು, ನಾಲ್ಕು , ಐದು!

ಓಡಿದರು ನದಿಯ ಕಡೆಗೆ.



ಒಬ್ಬ ಬಂಡೆಯ ಮೇಲೆ ಕುಳಿತ.



ಒಬ್ಬ ಕಟ್ಟೆಯ ಮೇಲೆ ನಿಂತ.





ಒಬ್ಬ ಮರ ಹತ್ತಿದ.



ಒಬ್ಬ ಹುಲ್ಲಿನ ಮೇಲೆ ಮಲಗಿದ.



ಐದನೇ ಮೀನುಗಾರ


ದೋಣಿ ಹತ್ತಿದ.

"ಹಲೋ , ಮೀನುಗಳೇ!"

ಅವನು ಕರೆದ.

" ನಿಮ್ಮನ್ನು ಹಿಡಿಯಲು ನಾವೆಲ್ಲಾ ಸಿದ್ದ! "





ಸಂಜೆಯ ಹೊತ್ತಿಗೆ

ಪ್ರತಿಯೊಬ್ಬ ಮೀನುಗಾರ

ಕೊಬ್ಬಿದ ಮೀನೊಂದನ್ನು

ಹಿಡಿದುಬಿಟ್ಟಿದ್ದಾ.



" ಒಳ್ಳೆಯ ಊಟ ಎದುರು

ನೋಡಬಹುದಲ್ಲವೇ! “

ಒಬ್ಬ ಮೀನುಗಾರ ಹೇಳಿದ.

" ಬನ್ನಿ , ಈಗ ಮನೆಗೆ ಹೋಗೋಣ."





" ನಾವೆಲ್ಲರೂ ಇದ್ದೇವೆ ಎಂದು

ಎಣಿಸಿ ನೋಡೋಣ, "

ಮತ್ತೊಬ್ಬ ಹೇಳಿದ.

" ನಮ್ಮಲ್ಲಿ ಯಾರಾದರೂ ನೀರಿನಲ್ಲಿ ಬಿದ್ದು

ಹೋಗಿದ್ದರೇ? “

ಅವನು ಎಣಿಸಲು ಪ್ರಾರಂಭಿಸಿದ.

" ಒಂದು , ಎರಡು , ಮೂರು , ನಾಲ್ಕು."

ನಾಲ್ಕೇ ನಾಲ್ಕು ಮೀನುಗಾರರನ್ನು ನೋಡುತ್ತಿದ್ದೀನಲ್ಲಾ! "





" ಅರೆರೆ!

ನಮ್ಮಲ್ಲಿ ಒಬ್ಬ ಕಾಣೆಯಾಗಿದ್ದಾನೇ! “



" ಅದು ಹಾಗೆ ಆಗಲು ಸಾಧ್ಯವಿಲ್ಲ! “

ಇನ್ನೊಬ್ಬ ಮೀನುಗಾರ ಹೇಳಿದ.

" ಬಹುಶಃ ನೀನು ತಪ್ಪಾಗಿ ಎಣಿಸಿದ್ದೀಯ."

ತಾನೂ ಎಣಿಸಲು ಪ್ರಾರಂಭಿಸಿದ.

" ಒಂದು , ಎರಡು , ಮೂರು , ನಾಲ್ಕು."



ನಾನೂ ನಾಲ್ಕೇ ಮೀನುಗಾರರನ್ನು ನೋಡುತ್ತಿದ್ದೀನಲ್ಲಾ!

ಹೌದೌದು ಇದು ಸರಿ.

ನಮ್ಮಲ್ಲಿ ಒಬ್ಬ ಮುಳುಗಿ ಹೋಗಿದ್ದಾನೇ! “

ಮೀನುಗಾರರು ಒಬ್ಬರನ್ನೊಬ್ಬರು

ಅಪ್ಪಿಕೊಂಡು ಅತ್ತರು.

ತುಂಬಾ ಅತ್ತರು.

" ಪಾಪ ನಮ್ಮ ಸ್ನೇಹಿತ! “

ಅವನಿಲ್ಲದೇ ನಾವು ಏನು ಮಾಡೋಣ? "







ಅಷ್ಟರಲ್ಲೀ ಅಲ್ಲಿಗೆ ಒಂದು ಪುಟ್ಟ ಹುಡುಗಿ ಬಂದಳು.

ಅವಳೂ ಮೀನು ಹಿಡಿಯಲು ಹೋಗುತ್ತಿದ್ದಳು.

" ನೀವೆಲ್ಲರೂ ಯಾಕೆ ಇಷ್ಟೊಂದು ಅಳುತ್ತಿದ್ದೀರಿ ? "

ಎಂದು ಕೇಳಿದಳು.



" ನಾವು ಐದು ಜನ ಇದ್ದೆವು.

ಆದರೆ ನಮ್ಮಲ್ಲಿ ಒಬ್ಬ ಮುಳುಗಿದ್ದಾನೆ. “

ಒಬ್ಬ ಮೀನುಗಾರ ಹೇಳಿದ.

" ನಾವು ನಾಲ್ವರು ಮಾತ್ರ ಉಳಿದಿದ್ದೇವೆ!

ನೋಡು , ಒಂದು , ಎರಡು , ಮೂರು , ನಾಲ್ಕು ."

ಅವನು ಮತ್ತೆ ಎಣಿಸಿದ.







ಪುಟ್ಟ ಹುಡುಗಿಗೆ ತಕ್ಷಣ ಅರ್ಥವಾಯಿತು.

ಮೀನುಗಾರ ತನ್ನನ್ನು ತಾನು ಎಣಿಸಲು ಮರೆತ್ತಿದ್ದ.

" ನಿಮ್ಮ ಸ್ನೇಹಿತನನ್ನು ಹುಡುಕಿ ಕೊಟ್ಟರೆ


ನಿಮ್ಮ ಮೀನುಗಳ್ಳನ್ನು ನನಗೆ ಕೊಡುವಿರಾ? "

ಪುಟ್ಟ ಹುಡುಗಿ ಕೇಳಿದಳು.

" ಕೊಡುತ್ತೇವೆ! ಕೊಡುತ್ತೇವೆ! "

ಅವರೆಲ್ಲರೂ ಸಂತೋಷದಿಂದ ಹೇಳಿದರು.





" ಸರಿ, ನೀವೆಲ್ಲರೂ ಒಬ್ಬೊಬ್ಬರಾಗಿ

ನದಿಗೆ ಹಾರಿ. "

ಪುಟ್ಟ ಹುಡುಗಿ ಹೇಳಿದಳು.

" ನಾನು ನಿಮ್ಮನ್ನು ಎಣಿಸುತ್ತೇನೆ."

ಮೀನುಗಾರರು ಹೇಳಿದಂತೆ ಮಾಡಿದರು.

ಒಬ್ಬೊಬ್ಬರಾಗಿ ನದಿಗೆ ಹಾರಿದರು.

ಚಪಾಕ್!

ಒಂದು!



ಎರಡು

ಮೂರು!

ನಾಲ್ಕು!



ಐದು!"

" ಐದು! "

ಮೀನುಗಾರರು ಒಟ್ಟಾಗಿ ಕೂಗಿದರು.

" ನಮ್ಮ ಕಳೆದುಹೋದ ಸ್ನೇಹಿತ ಸಿಕ್ಕಿದ!

ಅವನು ಮುಳುಗಿರಲೇ ಇಲ್ಲ! "





ಮೀನುಗಾರರು

ತಮ್ಮ ಎಲ್ಲಾ ಕೊಬ್ಬಿದ ಮೀನುಗಳನ್ನು

ಹುಡುಗಿಗೆ ಕೊಟ್ಟರು.

ನಂತರ ಒಟ್ಟಾಗಿ ಮನೆಗೆ ಮರಳಿದರು.



ನದಿಯಲ್ಲಿ ಬಿದ್ದು ಒದ್ದೆಯಾಗಿದ್ದರು.

ಊಟಕ್ಕೆ ಮೀನೂ ಇರಲಿಲ್ಲ.

ಆದರೂ, ಮತ್ತೆ ಒಟ್ಟಿಗಿದ್ದರಲ್ಲಾ,

ಅಷ್ಟೇ ಸಾಕು!